**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ ಸಿ ನಂಃ 737/2020.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಹೊನ್ನಾವರ, ಉತ್ತರಕನ್ನಡ.

**- ವಿರುದ್ಧ -**

| | | |
|---|---|---|
| ಆರೋಪಿತರುಃ- | ಎ-1 | ಶಿವಾನಂದ ಮಂಜು ಗೌಡ , |
| | ಎ-2 | ಮಂಜು ತಂದೆ ಕನ್ಯಾ ಗೌಡ , |
| | ಎ-3 | ಶ್ರೀಮತಿ ಗಣಪಿ ಕೋಂ ಮಂಜು ಗೌಡ , |
| | ಎ-4 | ದಯಾನಂದ ತಂದೆ ಮಂಜು ಗೌಡ , |
| | ಎ-5 | ನಾರಾಯಣ ತಂದೆ ತಿಮ್ಮಪ್ಪ ಗೌಡ, |
| | ಎ-6 | ಶ್ರೀಮತಿ ಗಿರಿಯಮ್ಮ ಕೋಂ ನಾರಾಯಣ ಗೌಡ, |
| | ಎ-7 | ವಿನಾಯಕ ತಂದೆ ನಾರಾಯಣ ಗೌಡ, |
| | ಎ-8 | ಸಚಿನ ತಂದೆ ನಾರಾಯಣ ಗೌಡ, |
| | ಎ-9 | ಕುಮಾರಿ ಸಂಗೀತಾ ನಾರಾಯಣ ಗೌಡ , |

**ಆಪಾದನೆ**

ಶ್ರೀ ಈರಣ್ಣ ಹುಣಶಿಕಟ್ಟಿ, ಬಿಕಾಂ. ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ದಿನಾಂಕಃ 19-04-2020 ರಂದು ಸಾಯಂಕಾಲ 6.00 ಗಂಟೆಯ ಸಮಯದಲ್ಲಿ ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕುಳಿಮನೆ ಕ್ರಾಸ್ ಹತ್ತಿರ ಫಾರೆಸ್ಟ್ ಸರ್ವೇ ನಂ. 46 ಅ 1 ರಲ್ಲಿಯ ಗೇರು ಪ್ಲಾಂಟೇಷನ್ ನಲ್ಲಿ 1 ನೇ ಆರೋಪಿಯಾದ ನೀನು, ಗೇರು ಹಣ್ಣು ಕೊಯ್ಯುತ್ತಾ ನಿಂತ ಪಿರ್ಯಾದಿಯ ಹೆಂಡತಿ ಚಾಸಾ-8 ನೇಯವಳಿಗೆ ಕಣ್ಣಿಗೆ ಕಾಣುವ ರೀತಿಯಲ್ಲಿ ಸಂಡಾಸಿಗೆ ಕುಳಿತುಕೊಂಡಿದ್ದು, ಮರಳಿ ಬರುತ್ತಿರುವಾಗ ನಿನಗೆ ಚಾಸಾ-8 ರವರು ಕಣ್ಣಿಗೆ ಕಾಣುವ ಹಾಗೆ ಸಂಡಾಸಿಗೆ ಕುಳಿತುಕೊಳ್ಳುತೀಯಲ್ಲಾ ತಿಳಿಯುವುದಿಲ್ಲವೇನೋ ಎಂದು ಕೇಳಿದ್ದಕ್ಕೆ, ನೀವು ಚಾಸಾ-8 ರವರನ್ನು ಉದ್ದೇಶಿಸಿ, ರಂಡೆ ಇದು ನಿಮ್ಮ ಅಪ್ಪನ ಜಾಗಾನಾ, ನೀನು ಯಾರು ಕೇಳುವಳು ಎಂದು ಹೇಳಿ

ಮಾನಭಂಗ ಮಾಡುವ ಉದ್ದೇಶದಿಂದ ಅವಳ ಎದೆಗೆ ಕೈ ಹಾಕಿ ತಳ್ಳಿದ್ದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 354** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಚಾಸಾ-8 ನೇಯವರು ಗಾಬರಿಗೊಂಡು ಕೂಗಿಕೊಂಡಾಗ, 1 ನೇ ಆರೋಪಿತನಾದ ನೀನು, ಇನ್ನೊಂದು ಪ್ಲೋಟಿ ನಲ್ಲಿದ್ದ ಪಿರ್ಯಾದಿ ಬರುತ್ತಿರುವುದನ್ನು ನೋಡಿದ ನೀನು ಅಲ್ಲೇ ಬಿದ್ದಿರುವ ಖಾಲಿ ಗಾಜಿನ ಬಾಟಲಿಯನ್ನು ಎತ್ತಿಕೊಂಡು ಅಲ್ಲಿರುವ ಪಗಾರಿಗೆ ಹೊಡೆದು ಒಡೆದ ಗಾಜಿನ ತುಂಡಿನಿಂದ ಶ್ರೀಮತಿ ರೋಹಿಣಿಗೆ ಚುಚ್ಚಲು ಹೋದಾಗ ಪಿರ್ಯಾದಿಯು ಅದನ್ನು ತಡೆದಿದ್ದು, ಅಷ್ಟರಲ್ಲಿ ಸ್ಥಳಕ್ಕೆ ಹೋಗಿರುವ 2 ರಿಂದ 9 ನೇ ಆಪಾದಿತರಾದ ನೀವು, ಪಿರ್ಯಾದಿ ಮತ್ತು ಚಾಸಾ-8 ನೇಯವರೊಂದಿಗೆ ಜಗಳ ಮಾಡಿ , ಆ ನಂತರ 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಪಿರ್ಯಾದಿಯ ಹಿಂದಿನಿಂದ ಹೋಗಿದ್ದೀರೆಂದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 143 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಚಾಸಾ-8 ನೇಯವರು ಗಾಬರಿಗೊಂಡು ಕೂಗಿಕೊಂಡಾಗ, 1 ನೇ ಆರೋಪಿತನಾದ ನೀನು, ಇನ್ನೊಂದು ಪ್ಲೋಟಿ ನಲ್ಲಿದ್ದ ಪಿರ್ಯಾದಿ ಬರುತ್ತಿರುವುದನ್ನು ನೋಡಿದ ನೀನು ಅಲ್ಲೇ ಬಿದ್ದಿರುವ ಖಾಲಿ ಗಾಜಿನ ಬಾಟಲಿಯನ್ನು ಎತ್ತಿಕೊಂಡು ಅಲ್ಲಿರುವ ಪಗಾರಿಗೆ ಹೊಡೆದು ಒಡೆದ ಗಾಜಿನ ತುಂಡಿನಿಂದ ಶ್ರೀಮತಿ ರೋಹಿಣಿಗೆ ಚುಚ್ಚಲು ಹೋದಾಗ ಪಿರ್ಯಾದಿಯು ಅದನ್ನು ತಡೆದಿದ್ದು, ಅಷ್ಟರಲ್ಲಿ ಸ್ಥಳಕ್ಕೆ ಹೋಗಿರುವ 2 ರಿಂದ 9 ನೇ ಆಪಾದಿತರಾದ ನೀವು, ಪಿರ್ಯಾದಿ ಮತ್ತು ಚಾಸಾ-8 ನೇಯವರೊಂದಿಗೆ ಜಗಳ ಮಾಡಿ , ಆ ನಂತರ 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಪಿರ್ಯಾದಿಯ ಹಿಂದಿನಿಂದ ಹೋಗಿ ಅವರ ಮನೆಯ ಕಾಂಪೌಂಡ್ ಒಳಗೆ ಅಕ್ರಮ ಪ್ರವೇಶ ಮಾಡಿದ್ದು , ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 447 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯದಂದು, 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ, ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ ಪಿರ್ಯಾದಿಗೆ ಮತ್ತು ಪಿರ್ಯಾದಿಯ ಹೆಂಡತಿ ಚಾಸಾ-8 ನೇಯವರಿಗೆ ಅವರ ಮನೆ ಬಾಗಿಲಲ್ಲೇ ಕೈಯಿಂದ ಹೊಡೆದು ಮತ್ತು ಕಾಲಿನಿಂದ ಒದ್ದು, ಸಾದಾ ಸ್ವರೂಪದ ಗಾಯ ಪಡಿಸಿದ್ದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 323 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯದಂದು, 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ, ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ ಪಿರ್ಯಾದಿಗೆ ಮತ್ತು ಪಿರ್ಯಾದಿಯ ಹೆಂಡತಿ ಚಾಸಾ–8 ನೇಯವರಿಗೆ ಬೋಳಿ ಮಗನೇ, ಬೋಳಿ ರಂಡೆ ಎಂದು ಅವಾಚ್ಯ ಶಬ್ಧದಿಂದ ಬೈದಿದ್ದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 504 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯದಂದು, 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ, ಪಿರ್ಯಾದಿಗೆ ಮತ್ತು ಪಿರ್ಯಾದಿಯ ಹೆಂಡತಿ ಚಾಸಾ–8 ನೇಯವರಿಗೆ ಉದ್ದೇಶಿಸಿ, ನಿಮ್ಮಿಬ್ಬರನ್ನು ಕೊಲೆ ಮಾಡದೇ ಬಿಡುವುದಿಲ್ಲ. ಎಂದು ಜೀವ ಬೆದರಿಕೆ ಹಾಕಿದ್ದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 506 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ, ಪಿರ್ಯಾದಿಯು ನಿಮ್ಮಿಂದ ತಪ್ಪಿಸಿಕೊಂಡು ಠಾಣೆಗೆ ಬರಲು ಅವರ ಮನೆಯಿಂದ ಮೋಟಾರ್ ಸೈಕಲ್ ನ್ನು ರೋಡಿಗೆ ತಂದಾಗ 7 ಮತ್ತು 8 ನೇ ಆಪಾದಿತನಾದ ನೀವು ಬೈಕ್ ನ್ನು ದೂಡಿ ಹಾಕಿದ್ದು, ಪ್ಲಗ್ಗಿನ ಕೇಬಲ್ ವೈಯರ್ ನ್ನು ಎಳೆದು ಹೊಡೆಯಲು ಹೋಗಿದ್ದಲ್ಲದೇ, ಕೋವಿಡ್–19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಕರ್ನಾಟಕ ರಾಜ್ಯಾದ್ಯಂತ ಲಾಕ್ ಡೌನ್ ಇದ್ದು, ಅನಾವಶ್ಯಕವಾಗಿ ಮನೆಯಿಂದ ಹೊರಗೆ ಬರಬಾರದು ಮತ್ತು ಸಾಂಕ್ರಾಮಿಕ ರೋಗವು ಹರಡದಂತೆ ಅಂತರ ಕಾಯ್ದುಕೊಳ್ಳಲು ಸೂಚಿಸಿದ್ದರೂ ಸಹ ಆ ಆದೇಶವನ್ನು ಉಲ್ಲಂಘಿಸಿದ್ದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 269, 270 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, 1 ರಿಂದ 9 ನೇ ಆರೋಪಿತರಾದ ನೀವೆಲ್ಲರೂ ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ ಅಕ್ರಮ ಮಂಡಳಿಯ ಸದಸ್ಯರಾಗಿ ದೊಂಬಿ ಮಾಡಿ , ಶಾಂತತೆಗೆ ಭಂಗ ಮಾಡಿದ್ದು, ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 147 ಸಹಿತ 149** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ .

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

1 ರಿಂದ 9 ನೇ ಆರೋಪಿತರ ಉತ್ತರ : ತಿಳಿಯಿತು

ಪ್ರಶ್ನೆ 2 : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

1 ರಿಂದ 9 ನೇ ಆರೋಪಿತರ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿತರು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕಃ 12-06-2023.**

(ಈರಣ್ಣ ಹುಣಶಿಕಟ್ಟಿ).,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

ಎ-1 ಶಿವಾನಂದ ಮಂಜು ಗೌಡ ,

ಎ-2 ಮಂಜು ತಂದೆ ಕನ್ಯಾ ಗೌಡ ,

ಎ-3 ಶ್ರೀಮತಿ ಗಣಪಿ ಕೋಂ ಮಂಜು ಗೌಡ ,

ಎ-4 ದಯಾನಂದ ತಂದೆ ಮಂಜು ಗೌಡ ,

ಎ-5 ನಾರಾಯಣ ತಂದೆ ತಿಮ್ಮಪ್ಪ ಗೌಡ,

ಎ-6 ಶ್ರೀಮತಿ ಗಿರಿಯಮ್ಮ ಕೋಂ ನಾರಾಯಣ ಗೌಡ,

ಎ-7 ವಿನಾಯಕ ತಂದೆ ನಾರಾಯಣ ಗೌಡ,

ಎ-8 ಸಚಿನ ತಂದೆ ನಾರಾಯಣ ಗೌಡ,

ಎ-9 ಕುಮಾರಿ ಸಂಗೀತಾ ನಾರಾಯಣ ಗೌಡ ,